ಓ.ಎಸ್. ನಂ. **9 /2019** ಪಿ.ಡಬ್ಲ್ಯೂ- **1**

<u>ಸಾಕ್ಷಿಯನ್ನು ದಿನಾಂಕ **9.6.2022** ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>

<u>ಪಾಟೀ ಸವಾಲು ಃ ಪ್ರತಿವಾದಿ 2, 4 ರಿಂದ 6 ಪರ ವಕೀಲರಿಂದಃ</u>

ಈ ದಾವೆಯಲ್ಲಿ ನಾನು ನನ್ನ ಅಜ್ಜನ ಹೆಣ್ಣುಮಕ್ಕಳನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ, 2 ನೇ ಪ್ರತಿವಾದಿಯ ಗಂಡ, 3 ರಿಂದ 7 ನೇ ಪ್ರತಿವಾದಿಗಳ ತಂದೆಯವರನ್ನು ಗುಜ್ಜನಾಯಕನ ಮಕ್ಕಳು ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ನನ್ನ ಅಜ್ಜನ ತಂದೆ ಹೆಸರು ಸಹ ಗುಜ್ಜನಾಯಕ ಎಂದರೆ ಸರಿ. ನನ್ನ ಮುತ್ತಜ್ಜನ ಕೊನೆ ಮಗ ಅದು ಗುಜ್ಜನಾಯಕ. ನನ್ನ ಮುತ್ತಜ್ಜನಿಂದ ನನ್ನ ಅಜ್ಜನಿಗೆ ಯಾವುದೇ ಸ್ವತ್ತುಗಳು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಗುಜ್ಜನಾಯಕನ ಮೊದಲ ಮಗ ಗುಜ್ಜನಾಯಕ ಎಂದು ನಾನು ವಾದಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿ. ನಮ್ಮ ಮುತ್ತಜ್ಜನಿಗೆ ಬೇರೆ ಮಕ್ಕಳಿದ್ದು ಅವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1975 ರಲ್ಲಿ ನನ್ನ ಅಜ್ಜ ಮೃತಪಟ್ಟಿರುವ ಬಗ್ಗೆ ಮರಣ ಪ್ರಮಾಣಪತ್ರ ಹಾಜರುಪಡಿಸಿರುವುದಿಲ್ಲ, ಆದರೆ ಅದು ಮ್ಯುಟೇಶನ್ ನಲ್ಲಿ ನಮೂದಾಗಿರುತ್ತದೆ. ನಿಪಿ2 ರಲ್ಲಿ ನನ್ನ ಅಜ್ಜ 1975 ರಲ್ಲಿ ಮೃತಪಟ್ಟಿರುತ್ತಾರೆ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ. ನನ್ನ ಅಜ್ಜ ಮತ್ತು ಅವರ ಸಹೋದರರು ಜಂಟಿಯಾಗಿ ಸ್ವಾಧೀನ ಹೊಂದಿದ್ದ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಅಜ್ಜ ಮತ್ತು ಅವರ ಸಹೋದರರು ಪಿತ್ರಾರ್ಜಿತ ಆಸ್ತಿಯನ್ನು ಭಾಗ ಮಾಡಿಕೊಂಡು ಸ್ವಾಧೀನ ಹೊಂದಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

ದೊಡ್ಡಕೆಂಪನಾಯಕ ನಮ್ಮ ಕುಟುಂಬಸ್ಥನಾಗಿರುವುದಿಲ್ಲ. ನಿಪಿ2 ನಾನು ಹಾಜರುಪಡಿಸಿರುವ ದಾಖಲೆ ಎಂದರೆ ಸರಿ. ನಿಪಿ2 ರಲ್ಲಿ ಗುಜ್ಜನಾಯಕ ರವರ ಮಗ ಗುಜ್ಜನಾಯಕ, ದೊಡ್ಡಕೆಂಪನಾಯಕನ ಮಗ ಕೋಣನಾಯಕ, ದೊಡ್ಡಕೆಂಪನಾಯಕನ ಮಗ ಕೆಂಪನಾಯಕ ಎಂದು ನಮೂಾದಾಗಿರುತ್ತದೆ ಎಂದರೆ ಸರಿ. ನಿಪಿ2 ನ್ನು ನಾನು ಪ್ರಶ್ನಿಸಿರುತ್ತೇನೆ, ಅದರ ಸಂಬಂಧ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ2 ರ ದಾಖಲೆ ಮೇರೆಗೆ ನಾನು ಗುಜ್ಜನಾಯಕ ಮೃತಪಟ್ಟು 5 ವರ್ಷವಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳು ಸಮವಾಗಿ ಭಾಗ ಮಾಡಿಕೊಂಡಿರುತ್ತಾರೆ ಎಂದು ನನ್ನ ವಾದಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿ. ದಾವಾಆಸ್ತಿಯ ಪಹಣಿಯಲ್ಲಿ ನಮ್ಮ ಹೆಸರು ಸೇರಿಸಬೇಕೆಂದು ಈ ದಾವೆ ಹೂಡಿರುತ್ತೇನೆ. 2018 ರಲ್ಲಿ ನನ್ನ ತಂದೆ ಮೃತಪಟ್ಟ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ದಾವೆಯಲ್ಲಿ ನಾನು ನನ್ನ ಸಹೋದರಿಯರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ. ನನ್ನ ವಾದಪತ್ರದಲ್ಲಿ ಈಗಾಗಲೇ ವಿಭಾಗ ವಾಗಿರುತ್ತದೆ ಎಂದು ತಿಳಿಸಿ, ಪ್ರತಿವಾದಿಗಳ ಭಾಗವನ್ನು ಕಬಳಿಸುವ ದುರುದ್ದೇಶದಿಂದ ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ2 ನ್ನು ನಾನು ಪ್ರಶಿಸಿ ಉಪವಿಭಾಗಾಧಿಕಾರಿ ಮುಂದೆ ಪ್ರಶ್ನೆ ಮಾಡಿರುತ್ತೇನೆ ಎಂದರೆ ಸರಿ. ಉಪವಿಭಾಗಾಧಿಕಾರಿ ರವರು ನ್ಯಾಯಾಲಯದಲ್ಲಿ ನಮ್ಮ ಹಕ್ಕನ್ನು ತೀರ್ಮಾನ ಮಾಡಿಕೊಳ್ಳಲು ತಿಳಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳನ್ನು ಮೇಲೆ ಹೇಳಿದ ಮೇಲ್ಮನವಿಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ತನ್ನ ಪಾಲಿಗೆ ಬಂದ ಸ್ವತ್ತಿನಲ್ಲಿ ಸಾಲ ಪಡೆದುಕೊಂಡು ಕೃಷಿ ಮಾಡುತ್ತಿದಾರೆ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಗಳ ಕುಟುಂಬದ ನಡುವೆ ಈಗಾಗಲೇ ವಿಭಾಗವಾಗಿದ್ದು, ಪ್ರತಿವಾದಿಗಳ ಸ್ವತ್ತನ್ನು

ಕಬಳಿಸುವ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡಲು ನನಗೆ ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.